ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಕರ್ನಾಟಕ- ಮಹಾರಾಷ್ಟ್ರ ಗಡಿ ವಿವಾದವನ್ನು ಬಗೆಹರಿಸುವ ವಿಷಯದಲ್ಲಿ ಮಹಾಜನ್ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಬೇಕೆಂಬುದೇ ಸರ್ಕಾರದ ಅಂತಿಮ ನಿಲುವಾಗಿದೆ. ಆದುದರಿಂದ ಈ ವಿಷಯದಲ್ಲಿ ಕರ್ನಾಟಕ ಸರ್ಕಾರವು ಮಹಾರಾಷ್ಟ್ರ ಸರ್ಕಾರದೊಂದಿಗೆ ಚರ್ಚಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ರೈತರು ಮತ್ತು ಮಧ್ಯಮ ವರ್ಗದವರಿಗೆ ಹೊರೆಯಾಗಿರುವ ವಿದ್ಯುತ್‌ದರ ಕಡಿಮೆ ಮಾಡುವುದು

1071 (1473) - ಶ್ರೀ ಮನೋಹರ್ ಪುನ್ನಪ್ಪ ಕಾಡೊಲ್ಕರ್ (ಉಚ್ಚಗಾಂವ್)ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಯ ಪ್ರಸ್ತಾವನೆಯಂತೆ, ರೈತರು ಹಾಗೂ ಮಧ್ಯಮ ವರ್ಗದವರಿಗೆ ಹೊರೆಯಾಗಿರುವ ವಿದ್ಯುತ್ ದರವನ್ನು ಕಡಿಮೆ ಮಾಡಲು ರಾಜ್ಯ ಸಾರ್ಕರವು ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ್ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಯು ವಿದ್ಯುತ್ ದರಗಳ ಪರಿಷ್ಕರಣೆಯ ಬಗ್ಗೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಮುಂದೆ ಸಲ್ಲಿಸಿದ ಪ್ರಸ್ತಾವನೆಯಲ್ಲಿ ಸರಾಸರಿ ಶೇಕಡ ಸುಮಾರು 30 ರಷ್ಟು ವಿದ್ಯುತ್ ದರಗಳ ಹೆಚ್ಚಳದ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಆದರೆ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಎಲ್ಲಾ ಸಾಧಕ ಬಾಧಕಗಳನ್ನು ಪರಿಶೀಲಿಸಿದ ನಂತರ, ಸರಾಸರಿ ಶೇಕಡ 16.2 ರಷ್ಟು ವಿದ್ಯುತ್ ಹೆಚ್ಚಳಕ್ಕೆ ತನ್ನ ಅನುಮೋದನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಗೆ ನೀಡಿರುತ್ತದೆ. ಆದಾಗ್ಯೂ, ಪ್ರವರ್ಗ ಎಲ್.ಟಿ. 4 (ಎ) ರಡಿಯಲ್ಲಿ ಬರುವ ನೀರಾವರಿ ಪಂಪುಸೆಟ್ಟುಗಳಿಗೆ 2002 ರ ವಿದ್ಯುತ್ ದರ ಪರಿಷ್ಕರಣೆಯಲ್ಲಿ ನಿಗಧಿಪಡಿಸಿಲಾಗಿರುವ 720 ರೂ. (ಪ್ರತಿ ಅಶ್ವಶಕ್ತಿಗೆ ವಾರ್ಷಿಕ ದರ)ಗಳನ್ನು ಹಿಂದಿನ ದರವಾದ 540 ರೂ (ಪ್ರತಿ ಅಶ್ವಶಕ್ತಿಗೆ ವಾರ್ಷಿಕ ದರ)ಗಳಿಗೆ ಇಳಿಸಿ, ಈ ವ್ಯತ್ಯಾಸದ ಹಣವನ್ನು ಸಹಾಯಧನ ರೂಪದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಗೆ ಭರಿಸಲು ಸರ್ಕಾರವು ಆದೇಶವನ್ನು ನೀಡಿರುತ್ತದೆ.

ಶಾಸಕರುಗಳಿಗೆ ಕ್ಷೇತ್ರಗಳಲ್ಲಿ ಪ್ರವಾಸ ಮಾಡಲು ಸರ್ಕಾರಿ ವಾಹನಗಳನ್ನು ಒದಗಿಸುವುದು

1072 (1541) - ಶ್ರೀ ಮನೋಹರ್ ಪ್ರಸನ್ನ ಕಾಡೋಲ್ಕರ್ (ಉಚ್ಚಗಾಂವ್) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರುಗಳು ಅವರ ಕ್ಷೇತ್ರಗಳಲ್ಲಿ ಪ್ರವಾಸ ಮಾಡಲು ಸರ್ಕಾರಿ ವಾಹನಗಳನ್ನು ಒದಗಿಸುವ ಬಗೆಗಿನ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ?

ಆ) ಇಲ್ಲದಿದ್ದಲ್ಲಿ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಹಾಗೂ ತಪಾಸಣೆ ಕಾರ್ಯಗಳನ್ನು ಕೈಗೊಳ್ಳಲು ಶಾಸಕರುಗಳಿಗೆ ವಾಹನಗಳನ್ನು ಒದಗಿಸುವುದು ಅವಶ್ಯಕವೆಂದು ಸರ್ಕಾರವು ಪರಿಗಣಿಸುವುದೆ?